**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್.ಸಿ ರವರ ನ್ಯಾಯಾಲಯ, ಮಳವಳ್ಳಿ**

**ಸಿಸಿ ನಂಃ 72/2024**

**ಪಿರ್ಯಾದಿ** ಃ **ಕರ್ನಾಟಕ ಸರ್ಕಾರ,**
ಮಳವಳ್ಳಿ ಗ್ರಾಮಾಂತರ ಪೋಲೀಸ್ ಠಾಣೆ ಮುಖೇನ.

- ವಿರುದ್ದ -

**ಆರೋಪಿ** ಃ **ಪುಟ್ಟೇಗೌಡ ಬಿನ್ ಶಿವಣ್ಣ,**
**ವಯಸ್ಸು** ಃ 31 ವರ್ಷ,
**ವಾಸಃ** ಚೋಳನಹಳ್ಳಿ ಗ್ರಾಮ,
ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

**ಆರೋಪಣೆ**

ದಿನಾಂಕ **14.05.2024** ರಂದು ಮಧ್ಯರಾತ್ರಿ **12.00** ಗಂಟೆಯ ಸಮಯದಲ್ಲಿ ಮಳವಳ್ಳಿ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಗೌಡಗೆರೆ ಗ್ರಾಮದ ಗೇಟ್ ಸಮೀಪವಿರುವ ಗೋದ್ರೇಜ್ ಕ್ರೀಮ್ ಲೈನ್ ಡೈರಿ ಜೆರ್ಸಿ ಪ್ರಾಡಕ್ಟ್ ಲಿಮಿಟೆಡ್ ಕಟ್ಟಡದ ಹಾಗೂ ಗೌಡಗೆರೆ ಗ್ರಾಮದ ಅಣ್ಣಯ್ಯನ ಚನ್ನಪ್ಪ ರವರಿಗೆ ಸೇರಿದ ವಾಸ ಇರದ ಮನೆಯ ನೇರದಲ್ಲಿ ಹಾದು ಹೋಗಿರುವ ಮಳವಳ್ಳಿ-ಹಲಗೂರು ರಾಷ್ಟ್ರೀಯ ಹೆದ್ದಾರಿ-**209** ರ ಟಾರು ರಸ್ತೆಯಲ್ಲಿ ವಿನೋದ್ ಕುಮಾರ್ ರವರು ಮಹದೇಶ್ವರ ಬೆಟ್ಟಕ್ಕೆ ಹೋಗಲೆಂದು ತಮ್ಮ ಬಾಬ್ತು ಕೆಎ-**42**-ಇಎಫ್-**7420** ನಂಬರಿನ ಬಜಾಜ್ ಪಲ್ಸರ್ ಮೋಟಾರ್ ಸೈಕಲ್‌ನ ಹಿಂಬದಿ ಸವಾರರಾಗಿ ಸಾಕ್ಷಿ-**2** ರವರನ್ನು ಕೂರಿಸಿಕೊಂಡು ವಾಹನ ಚಾಲನ ಪರವಾನಿಗೆ ಹೊಂದದೆ ಮೋಟಾರ್ ಸೈಕಲ್ ಅನ್ನು ಮಳವಳ್ಳಿ ಕಡೆಗಾದಂತೆ ಚಾಲನೆ ಮಾಡಿಕೊಂಡು ಹೋಗುತ್ತಿದ್ದಾಗ, ಆರೋಪಿಯಾದ ನೀವು ಸಾಕ್ಷಿ **20** ರವರ ಬಾಬ್ತು ಕೆಎ-**11**-ಬಿ-**2555** ನಂಬರಿನ ಐಷರ್ ಪ್ರೋ-**1055** ರ ಗೂಡ್ಸ್ ವಾಹನವನ್ನು ಮಳವಳ್ಳಿ ಕಡೆಯಿಂದ ಹಲಗೂರು ಕಡೆಗಾದಂತೆ ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ರಸ್ತೆಯ ಬಲಕ್ಕೆ ಚಾಲನೆ ಮಾಡಿ ವಿನೋದ್ ಕುಮಾರ್ ರವರು ಚಾಲನೆ ಮಾಡಿಕೊಂಡು ಬರುತ್ತಿದ್ದ ಬೈಕ್‌ಗೆ ಡಿಕ್ಕಿಪಡಿಸಿ

ಅಪಘಾತವನ್ನುಂಟು ಮಾಡಿರುತ್ತೀರಿ. ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 279 ರ ರೀತ್ಯಾ ಈ ನ್ಯಾಯಾಲಯದ ಸಂಜ್ಞಾನದ ವ್ಯಾಪ್ತಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದೀರೆಂದು ನಿಮ್ಮ ವಿರುದ್ಧ ಆಪಾದಿಸಿದೆ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಯಾದ ನೀವು ಸಾಕ್ಷಿ-20 ರವರ ಬಾಬ್ತು ಕೆಎ-11-ಬಿ-2555 ನಂಬರಿನ ಐಷರ್ ಪ್ರೋ-1055 ರ ಗೂಡ್ಸ್ ವಾಹನವನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ವಿನೋದ್ ಕುಮಾರ್ ರವರ ಬೈಕ್ ಡಿಕ್ಕಿಪಡಿಸಿದ ಪರಿಣಾಮ ವಿನೋದ್ ಕುಮಾರ್ ರವರು ಕೆಳಗೆ ಬಿದ್ದು, ಅವರ ತಲೆ, ಹಣೆ, ಕೈ-ಕಾಲುಗಳಿಗೆ ತೀವ್ರವಾಗಿ ಪೆಟ್ಟಾಗಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದು, ಚಿಕಿತ್ಸೆ ಫಲಕಾರಿಯಾಗದೆ ದಿನಾಂಕ 15.06.2024 ರಂದು ಬೆಳಗಿನ ಜಾವ 2.50 ಗಂಟೆಯ ಸಮಯದಲ್ಲಿ ಮೃತರಾಗಿರುತ್ತಾರೆ. ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 304(ಎ) ರ ರೀತ್ಯಾ ಈ ನ್ಯಾಯಾಲಯದ ಸಂಜ್ಞಾನದ ವ್ಯಾಪ್ತಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದೀರೆಂದು ನಿಮ್ಮ ವಿರುದ್ಧ ಆಪಾದಿಸಿದೆ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಯಾದ ನೀವು ಸಾಕ್ಷಿ-20 ರವರ ಬಾಬ್ತು ಕೆಎ-11-ಬಿ-2555 ನಂಬರಿನ ಐಷರ್ ಪ್ರೋ-1055 ರ ಗೂಡ್ಸ್ ವಾಹನವನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ವಿನೋದ್ ಕುಮಾರ್ ರವರ ಬೈಕ್ ಡಿಕ್ಕಿಪಡಿಸಿದ ಪರಿಣಾಮವಾಗಿ, ವಿನೋದ್ ಕುಮಾರ್ ರವರ ಬೈಕ್‌ನಲ್ಲಿ ಹಿಂಬದಿ ಸವಾರರಾಗಿದ್ದ ಸಾಕ್ಷಿ-2 ರವರು ಕೆಳಗೆ ಬಿದ್ದು, ಅವರ ಎಡಕಾಲಿನ ಮಂಡಿಗೆ ಸಾಮಾನ್ಯ ಸ್ವರೂಪದ ಗಾಯಾವನ್ನುಂಟು ಮಾಡಿರುತ್ತೀರಿ. ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 337 ರ ರೀತ್ಯಾ ಈ ನ್ಯಾಯಾಲಯದ ಸಂಜ್ಞಾನದ ವ್ಯಾಪ್ತಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದೀರೆಂದು ನಿಮ್ಮ ವಿರುದ್ಧ ಆಪಾದಿಸಿದೆ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಯಾದ ನೀವು ಸಾಕ್ಷಿ-20ರವರ ಬಾಬ್ತು ಕೆಎ-11-ಬಿ-2555 ನಂಬರಿನ ಐಷರ್ ಪ್ರೋ-1055 ರ ಗೂಡ್ಸ್ ವಾಹನವನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ಅಪಘಾತಪಡಿಸಿದ ನಂತರ ಗಾಯಾಳುಗಳನ್ನು ಉಪಚರಿಸದೆ ಮತ್ತು ಅಪಘಾತದ ವಿಷಯವನ್ನು ಹತ್ತಿರದ ಪೊಲೀಸ್ ಠಾಣೆಗೆ ತಿಳಿಸದೆ ವಾಹನ ಸಮೇತ ಸ್ಥಳದಿಂದ ಹೊರಟು ಹೋಗಿರುತ್ತೀರಿ. ಆ ಮೂಲಕ ಭಾರತೀಯ ಮೋಟಾರ್ ವಾಹನ ಕಾಯಿದೆ ಕಲಂ 187 ರ ರೀತ್ಯಾ ಈ ನ್ಯಾಯಾಲಯದ ಸಂಜ್ಞಾನದ ವ್ಯಾಪ್ತಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದೀರೆಂದು ನಿಮ್ಮ ವಿರುದ್ದ ಆಪಾದಿಸಿದೆ.

ಪ್ರಶ್ನೆಃ 1. ಮೇಲೆ ಓದಿ ಹೇಳಿ ವಿವರಿಸಿದ ಆಪಾದನೆಯು ಅರ್ಥವಾಯಿತೇ?

<u>ಉತ್ತರಃ</u>

ಪ್ರಶ್ನೆ. 2. ಆಪಾದನೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಬಯಸುತ್ತೀರಾ ?

<u>ಉತ್ತರಃ</u>

(ಮೇಲ್ಕಂಡ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿ ಸರಿಯಾಗಿರುತ್ತದೆಂದು ಈ ಮೂಲಕ ದೃದೀಕರಿಸುತ್ತೇನೆ.)

ದಿನಾಂಕಃ 06.08.2025

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ, ಮಳವಳ್ಳಿ.**